**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC**-657/2025 **PW**: 1

**ದಿಃ 11.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರು ಶ್ರೀಮತಿ ಸಿ ಕೆ ವಕೀಲರಿಂದಃ**

ನನ್ನ ಹುದ್ದೆ Assistant Traffic Superintendent in NWKRTC. ನಮ್ಮ ಇಲಾಖೆಯಲ್ಲಿ ಕೇಸು ದಾಖಲಿಸಿಸಲು ಯಾರು ಮಾಹಿತಿ ಕೊಡುತ್ತಾರೆಂದರೆ ಸಾಕ್ಷಿ ಲಾ ಸೆಕ್ಷನನಿಂದ ಕೊಡುತ್ತಾರೆ ಎನ್ನುತ್ತಾರೆ. ಸದರಿ ಲಾ ಸೆಕ್ಷನಲ್ಲಿ ಕ್ವಾಲಿಪೈಡ ಲೀಗಲ ನಾಲೇಜ ಇರುವವರು ಇದ್ದಾರೆಂದರೆ ಸರಿ. ಸದರಿ ಪ್ರಕರಣದ ಅಪಘಾತ ದಿನಾಂಕಃ05.04.2021 ರಂದು ಆಗಿದೆ ಎಂದರೆ ಸರಿ. ಆ ಪ್ರಕಾರ ದಿಃ 05.04.2021 ರಂದು ಈ ಅಪಘಾತ ಕುರಿತು ಒಂದು ದೂರು ದಾಖಲಾಗಿದೆ ಎಂದರೆ ಸರಿ. ನಾವು ಸದರಿ ಅಪಘಾತದ ಕುರಿತಾಗಿ 2025 ರಲ್ಲಿ ಈ ಪ್ರಕರಣ ದಾಖಲು ಮಾಡಿದ್ದೇವೆಂದರೆ ಸರಿ. ಸದರಿ ಪ್ರಕರಣವನ್ನು ವಿಳಂಬವಾಗಿ ಸಲ್ಲಿಸಿದ್ದು ಸದರಿ ವಿಳಂಬಕ್ಕೆ ನಾನು ಸರಿಯಾದ ಕಾರಣಗಳನ್ನು ನನ್ನ ಅರ್ಜಿಯಲ್ಲಾಗಲಿ ಅಥವಾ ಪ್ರಮಾಣ ಪತ್ರದಲ್ಲಾಗಲಿ ತೋರಿಸಿಲ್ಲ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎನ್ನುತ್ತಾರೆ. ನಮ್ಮ ನಿರ್ಲಕ್ಷ್ಯತನದಿಂದ 2021 ರಿಂದ 2025 ರವರೆಗೆ ಸುಮ್ಮನಿದ್ದು ಈಗ ಪ್ರಕರಣ ದಾಖಲು ಮಾಡಿರುತ್ತೇವೆಂದರೆ ಸಾಕ್ಷಿ ನಮ್ಮ ನಿರ್ಲಕ್ಷ್ಯತನ ಇಲ್ಲ ಅದಕ್ಕೆ ಕಾರಣ ಇದೆ ಎನ್ನುತ್ತಾರೆ. 4 ವರ್ಷಗಳ ನಂತರ ಸದರಿ ಪ್ರಕರಣವನ್ನು ದಾಖಲಿಸಿದ್ದು ಸದರಿ ವಿಳಂಬಕ್ಕೆ due diligence ತೋರಿಸಿಲ್ಲ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪ್ರಸ್ತುತ ಕಾಯ್ದೆ ತಿದದಪಡಿ ಪ್ರಕಾರ 6 ತಿಂಗಳ ನಂತರ ದಾಖಲಿಸಿದ ಪ್ರಕರಣ ಕಾಯ್ದೆ ಅಡಿ ಪುರಸ್ಕೃತ ಇಲ್ಲ ಎಂದರೆ ಸಾಕ್ಷಿ ಅದಕ್ಕೆ ಕಾರಣ ಇದೆ ಎನ್ನುತ್ತಾರೆ. 4 ವರ್ಷದ ವಿಳಂಬವನ್ನು ನಾನು ಸರಿಯಾಗಿ ನನ್ನ ಅರ್ಜಿಯಲ್ಲಿ ವಿವರವಾಗಿ ವಿವರಣೆ ನೀಡಿಲ್ಲ ಎಂದರೆ ಸಾಕ್ಷಿ ವಿವರ ತೋರಿಸಿದ್ದೇವೆ ಎನ್ನುತ್ತಾರೆ.

**ಮರು ವಿಚಾರಣೆ ಇಲ್ಲಾ –**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.